**<u>ಸಾಕ್ಷಿಯನ್ನು ದಿನಾಂಕಃ 25-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಅಬ್ಜೆಕ್ಟರ್ ಪರ ವಕೀಲರವರಿಂದಃ</u>**

ನನ್ನ ಕೇಸಿಗೆ ಪೂರಕವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವೆನು. ಸಾಕ್ಷಿಯು ಹಾಜರುಪಡಿಸಿದ ಹಾಗೂ ನ್ಯಾಯಾಲಯವು ನಿಶಾನೆಗೊಳಿಸಿರುವ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

**ನಿಪಿ-1-3** : ಪೋಟೋಗಳು

**ನಿಪಿ-4** : ಸಿಡಿ

**ನಿಪಿ-5** : ಪಹಣಿ

**ನಿಪಿ-6** : ತೆರಿಗೆ ಬೇಡಿಕೆ ರಿಜಿಸ್ಟರ್

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಅಬೆಜಕ್ಟರ್ ಪರ ವಕೀಲರು ಕಾಲವಕಾಶ ಕೋರಿದ್ದು ಮನವಿಯನ್ನು ತಿರಸ್ಕರಿಸಲಾಯಿತು.**

**<u>ಪಾಟೀ ಸವಾಲುಃ ಡಿ ಹೆಚ್ ಅರ್ ಪರ ವಕೀಲರಿಂದಃ-</u>**

1. ನಾನು 7 ನೇ ತರಗತಿಯ ವರೆಗೆ ಕಲಿತಿದ್ದೇನೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡಲು ಕಲಿತ್ತಿದ್ದೇನೆ. ಹಿರಿಯ ಸಿವಿಲ್ ನ್ಯಾಯಾಲಯದ OS No. 144/2020 ರಲ್ಲಿ ನಾನು 3 ನೇ ವಾದಿಯಾಗಿರುವೆನು ಅಂದರೆ ಸರಿ. ಹಿಗಿರಿಯ ಸಿವಿಲ ನ್ಯಾಯಾಲಯದ OS NO. 193/2023 ರಲ್ಲಿ 2 ನೇ ವಾದಿಯಾಗಿ ಪಕ್ಷಗಾರನಿರುವನು ಅಂದರೆ ಸರಿಯಲ್ಲ. ಈ ನ್ಯಾಯಾಲಯದ OS 75/2009 ಪ್ರಕಣದಲ್ಲಿ ನಾನು ಪಕ್ಷಗಾರನಾಗಿ ಇರಲಿಲ್ಲ ಅಂದರೆ ಸರಿಯಲ್ಲ.

OS No. 144/2020 ರಲ್ಲಿ ನಾವು ವಾಜ್ಯದಲ್ಲಿನ ಜಾಗದಲ್ಲಿ ಹರಿಜನ ಬಾವಿ ಇದೆ ಎಂಬ ಕಾರಣಕ್ಕೆ ಮತ್ತು ನಾವು ಅದನ್ನು ಬಹಳ ಹಿಂದಿನಿಂದಲೂ ಉಪಯೋಗ ಮಾಡುತ್ತಾ ಬಂದಿದ್ದ ಕಾರಣಕ್ಕೆ ಕೇಸನ್ನು ದಾಖಲಿಸಿರುತ್ತೇವೆ. ನಾನು ಹೇಳುತ್ತಿರುವ ಬಾವಿ ಮತ್ತು ಈ ಅಮಲು ಜಾರಿಯಲ್ಲಿರುವ ಬಾವಿ ಹರಿಜನ ಬಾವಿ ಆಗಿರುವುದಿಲ್ಲ ಮತ್ತು ಅದು ಶೇಖ್ ಬಾವಿ ಆಗಿರುತ್ತದೆ ಅಂದರೆ ಸಾಕ್ಷಿಯು ಅದು ಶೇಖ್ ಬಾವಿ ಆಗಿರುವುದಿಲ್ಲ ಅದು ಸೇದುವ ಬಾಗಿ ಆಗಿರುವ ಕಾರಣ ಶೇಖಿ ಬಾವಿ ಎಂದು ತಪ್ಪಾಗಿ ಉಚ್ಚಾರ ಮಾಡುತ್ತಿರುವರು ಎಂದು ನುಡಿದರು.

2. ಅಮಲು ಜಾರಿ ದಾವಾ ಸ್ವತಿನಲ್ಲಿ ಇರುವ ಬಾವಿಯು ಹರಿಜನ ಬಾವಿ ಆಗಿರುತ್ತದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಬೇರೆ ಯಾವುದೋ ಜಾಗದ ಮತ್ತು ಬಾವಿಯ ದಾಖಲೆಗಳನ್ನು ಅದರಿಸಿಕೊಂಡು ನಾನು ಅಮಲು ಜಾರಿ ದಾವಾ ಸ್ವತ್ತಿನ ಮೇಲೆ ಸುಳ್ಳು ಕ್ಲೇಮು ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. OS 193/2025 ರ ದಾವೆಯನ್ನು ಯಾವ ಸರ್ವೆ ನಂಬರಿಗೆ ಸಂಬಂದಿಸಿದಂತೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಸರ್ವೆ ನಂಬರು 650 ಬಿ ಅಲ್ಲಿ 1 ಎಕರೆ 54 ಸೆನ್ಸನಲ್ಲಿ ಪೈಕಿ ಜಾಗವನ್ನು ಅಂದರೆ ಪೂರ್ವ ಪಶ್ಚಿಮ 100 ಅಡಿ ಹಾಗೂ ಉತ್ತರ ದಕ್ಷಿಣ 70 ಅಡಿ ಜಾಗವನ್ನು ನಾವು ಕ್ಲೇಮು ಮಾಡಿದ್ದೇವೆ ಅಂದರೆ ಸರಿ. OS No. 144/2020 ರಲ್ಲಿ ಡೋರ ನಂ 456/96 ಬಿ4 ವಿಸ್ತೀರ್ಣ ಪೂರ್ವ ಪಶ್ಚಿಮ 25

ಅಡಿ ಹಾಗೂ ಉತ್ತರ ದಕ್ಷಿಣೆ 27 ಅಡಿ ಜಾಗವನ್ನು ನಾವು ಕ್ಲೇಮ ಮಾಡಿದ್ದೇವೆ ಅಂದರೆ ಇರಬಹುದು.

3. ಮೇಲೆ ಹೇಳಿದ ಎರಡೂ ದಾವೆಗಳಲ್ಲಿ OS NO. 75/2009 ರಲ್ಲಿ ಕಾಣಿಸರುವ ಚೆಕ್ಕು ಬಂದಿಗಳನ್ನು ತೋರಿಸಿ ಕ್ಲೇಮು ಮಾಡುತ್ತಿದ್ದೇವೆ ಅಂದರೆ ಸರಿ. ಈ ದಾವೆಯಲ್ಲಿ ಆಕ್ಷೇಪ ಹಾಕಲು ನನಗೆ ಯಾವುದೇ ಅರ್ಹತೆ ಇರುವುದಿಲ್ಲ ಅಂದರೆ ಸರಿಯಲ್ಲ. ಡಿಕ್ರಿದಾರನಿಗೆ ತೊಂದರೆ ಕೊಡಲು ಹಲವಾರು ದಾವೆಗಳನ್ನು ಸಲ್ಲಿಸಿ ನ್ಯಾಯಾಲಯದ ಸಮಯವನ್ನು ಹಾಳು ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೇಲೆ ಹೇಳಿದ 2 ದಾವೆಗಳಲ್ಲಿ ನಾವು ಅದಾರಿಸಿರುವ ದಾಖಲೆಗಳು ಈ ಅರ್ಜಿಯ ಅಮಲು ಜಾರಿ ದಾವಾ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳು ಆಗಿರುವುದಿಲ್ಲ ಅಂದರೆ ಸರಿಯಲ್ಲ.

4. ಸರ್ವೆ ನಂ 650/ಬಿ ಇದು ಅಮಲು ಜಾರಿ ಅರ್ಜಿ ದಾವಾ ಸ್ವತ್ತಿನ ಚೆಕ್ಕು ಬಂದಿಯಾಗಲೀ ಹತ್ತಿರದಲ್ಲಿ ಆಗಲೀ ಇರುವುದಿಲ್ಲ ಅಂದರೆ ಸರಿಯಲ್ಲ. ಸರ್ವೆ ನಂ 650/ಬಿ ಇದರ ಪಹಣಿ ಸರ್ಕಾರದ ಹೆಸರಿನಲ್ಲಿರುವುದು. 650/ಬಿ ಇದು ಐಬಿ ವೃತ್ತದಲ್ಲಿ ಇದೆ ಎಂದು ತೋರಿಸಲು FMB ಸ್ಕೆಚ್ಚ ಮತ್ತು ಸಾರ್ವಜನಿಕ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಿದ್ದೇನೆ ಅಂದರೆ ಸರಿ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಮಲು ಜಾರಿ ದಾವಾ ಸ್ವತ್ತಿನ ಮೂಲ ಸರ್ವೆನಂ 160 ವಿಸ್ತೀರ್ಣ 40 ಸೆನ್ಸ ಆಗಿತ್ತು ಅಂದರೆ ಸರಿ. ಈ ಕೇಸಿನ

ಅರ್ಜಿ ಶೆಡ್ಯೂಲ್ ಸ್ವತ್ತು ಹರಪನಹಳ್ಳಿ ನಗರದ 1ನೇ ವಾರ್ಡಿನಲ್ಲಿ ಬರುತ್ತದೆ ಅಂದರೆ ಮೊದಲಿನಿಂದಲೂ 1ನೇ ವಾರ್ಡಿನಲ್ಲಿತ್ತು ಅಂದರೆ ಈಗ 5ನೇ ವಾರ್ಡಿನಲ್ಲಿ ಇರುವುದು. ಸಾಕ್ಷಿ ಮುಂದುವರೆದು ಬಾವಿ ಮಾತ್ರ 1ನೇ ವಾರ್ಡಿನಲ್ಲಿರುವುದು ಎಂದು ನುಡಿದರು. ಐಬಿ ವೃತ್ತದಲ್ಲಿ ಅಮಲು ಜಾರಿ ಅರ್ಜಿ ಸ್ವತ್ತಿನಲ್ಲಿ ಇರುವ ಬಾವಿ ಅಲ್ಲದೇ ಇನ್ನೊಂದು ಬಾವಿ ಇರುವುದು ಅಂದರೆ ಸರಿ. ಸಾಕ್ಷಿ ಮುಂದುವರೆದು ಮಾದಿಗರು ಮುಟ್ಟಿದರು ಎಂಬ ಕಾರಣಕ್ಕೆ ಬಾವಿಯನ್ನು ನಮಗೆ ಬಿಟ್ಟುಕೊಟ್ಟು ಬೇರೆ ಬಾವಿಯನ್ನು ಇತರರು ಮಾಡಿಕೊಂಡರು ಎಂದು ನುಡಿದರು. ಸದರಿ ಇನ್ನೊಂದು ಬಾವಿಯು ನಮ್ಮ ಸಮುದಾಯಕ್ಕೆ ಸೇರಿದ ಬಾವಿ ಆಗಿರುತ್ತದೆ ಮತ್ತು ನಾನು ಅಮಲು ಜಾರಿ ಸ್ವತ್ತಿನ ಬಾವಿಯನ್ನು ಅದಾರರಹಿತವಾಗಿ ಕ್ಲೇಮು ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ.

5. ಡೊರ ನಂ 456/96/ಬಿ4 ಪೂರ್ವ ಪಶ್ಚಿಮ 25 ಅಡಿ ಮತ್ತು ಉತ್ತರ ದಕ್ಷಿಣ 27 ಅಡಿ ಇದರ ಪೂರ್ವಕ್ಕೆ ಅರಣಿ ಚೆಮನ್ ವಲೀ ಇವರ ಮನೆ ಇದೆ ಅಂರದೆಸ ರಿಯಲ್ಲ. ಪಶಿಚಮಕ್ಕೆ ಹೊಸಪೇಟೆ ರಸ್ತೆ ಇರುವುದು ಅಂದರೆ ಸರಿ. ಉತ್ತರಕ್ಕೆ ಹಾಲಿ ತಾಲೂಕು ಪಂಚಾಯತಿಗೆ ಹೋಗುವ ದಾರಿ ಇರುವುದು ಅಂದರೆ ಸರಿ ದಕ್ಷಿಣಕ್ಕೆ ಚಮನ್ ಸಬ್ ಇವರ ಮನೆಗೆ ಹೋಗುವ ದಾರಿ ಇದೆ ಅಂದರೆ ಸರಿಯಲ್ಲ. ಈ ಸ್ವತ್ತು ಡಿಕ್ರಿದಾರರಿಗೆ ಸಂಬಂದಿಸಿದ ಸ್ವತ್ತಾಗಿರುತ್ತದೆ ಅಂದರೆ ಸರಿಯಲ್ಲ. ಡಿಕ್ರಿದರರು ಅದನ್ನು ಕಾನೂನುಬದ್ದವಾಗಿ ಖರೀದಿ ಮಾಡಿರುವರು

ಅಂದರೆ ಸರಿಯಲ್ಲ. ನಾವು ಹಾಗೂ ತೀರ್ಪುಋಣಿ ಮಿಲಾಮಿಪಿಯಾಗಿ ಡಿಕ್ರಿದಾರ ವಿರುದ್ಧ ಸುಳ್ಳು ಕ್ಲೇಮು ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ.

6. ನಿಪಿ 6 ದಾಖಲೆಯ ಕುರಿತು OS 144/2020 & 193/2025 ರ ದಾವೆಯ ಶೆಡ್ಯೂಲಿನಲ್ಲಿ ಮಾಹಿತಿಯನ್ನು ಒದಗಿಸಿರುದಿಲ್ಲ ಅಂರದೆ ಸರಿಯಲ್ಲ. ನಾವು ಇತ್ತೀಚೆಗೆ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ನಿಪಿ 6 ನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

**ಓ ಹೇ ಕೇ ಸರಿಯಿದೆ.**

25.03.2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

ಸಾಕ್ಷಿಯ ಸಹಿ 25.03.2026